ನಗರ, ಬೆಂಗಳೂರು ಮಹಾನಗರ ಪ್ರದೇಶಾಭಿವೃದ್ಧಿ ಪ್ರಾಧಿಕಾರದ ಅಡಿಯಲ್ಲಿ ಅಧಿಸೂಚಿತಗೊಂಡಿರುವ ಪ್ರದೇಶ, ಬೆಂಗಳೂರು ಹಸಿರು ಪಟ್ಟಿಯಲ್ಲಿರುವ ಪ್ರದೇಶ ಹಾಗೂ ರಾಜ್ಯದ ಇತರ ನಗರಸಭೆ ಮತ್ತು ಪುರಸಭೆ ವ್ಯಾಪ್ತಿಯಲ್ಲಿಯಲ್ಲಿಯ ಕುಡಿಯುವ ನೀರಿನ ಆಸರೆಯಾಗಿರುವ ಕೆರೆಗಳನ್ನು ಅಭಿವೃದ್ಧಿ ಪಡಿಸಲು ಸಾಧ್ಯವಾಗುತ್ತದೆ.

ಊ) ಬೆಂಗಳೂರು ನಗರದಲ್ಲಿ ಕೆರೆಗಳಿಗೆ ಕೊಳಚೆ ನೀರು ಸೇರದಂತೆ ಬಿ.ಡಬ್ಲ್ಯೂಎಸ್.ಎಸ್.ಬಿ. ಯವರು ಒಳಚರಂಡಿ ಕೊಳವೆ ಮಾರ್ಗವನ್ನು ಅಳವಡಿಸುವ ಕಾರ್ಯವನ್ನು ಕೈಗೊಂಡಿದ್ದು, ಇದು 2014–15ರಲ್ಲಿ ಸಂಪೂರ್ಣಗೊಳ್ಳುವುದಾಗಿ ಮಾನ್ಯ ಉಚ್ಚ ನ್ಯಾಯಾಲಯಕ್ಕೆ ಅಫಿಡೆವಿಟ್ ಸಲ್ಲಿಸಿರುತ್ತದೆ. ತ್ಯಾಜ್ಯ ಮತ್ತು ಮಾಲಿನ್ಯವನ್ನು ತಡೆಗಟ್ಟದೆ ಯಾವುದೇ ಕೆರೆ ಅಭಿವೃದ್ಧಿ ಕಾರ್ಯವನ್ನು ಕೈಗೊಳ್ಳಲು ಸಾಧ್ಯವಾಗುವುದಿಲ್ಲ. ಬಿಡಬ್ಲ್ಯೂಎಸ್.ಎಸ್.ಬಿ ಯವರು ಕೆರೆಗೆ ಸೇರುವ ಕೊಳಚೆ ನೀರನ್ನು ಮಾರ್ಗಪಲ್ಲಟಗೊಳಿಸಿ, ಇಲ್ಲವೇ ಸಂಸ್ಕರಿಸಿದ ಶುದ್ಧೀಕರಿಸಿದ ನೀರನ್ನು ಕೆರೆಗೆ ಬಿಡಲು ಹಂತ ಹಂತವಾಗಿ ಕ್ರಮ ಕೈಗೊಳ್ಳುತ್ತಿದ್ದು, ಅಂತಹ ಕೆರೆಗಳಲ್ಲಿ ಅಭಿವೃದ್ಧಿ ಕಾರ್ಯವನ್ನು ಕೈಗೆತ್ತಿಕೊಳ್ಳಲಾಗುತ್ತಿದೆ. ರಾಜ್ಯದ ಇತರ ನಗರಗಳಲ್ಲಿರುವ ಕೆರೆಗಳಿಗೆ ತ್ಯಾಜ್ಯ ಮತ್ತು ಮಾಲಿನ್ಯವನ್ನು ಸೇರುವುದನ್ನು ತಡೆಗಟ್ಟಲು ಸ್ಥಳೀಯ ಸಂಸ್ಥೆಗಳಿಗೆ ಈಗಾಗಲೇ ಸೂಚನೆ ನೀಡಲಾಗಿದೆ. ತ್ಯಾಜ್ಯ ಮತ್ತು ಮಾಲಿನ್ಯವನ್ನು ತಡೆಗಟ್ಟಲು ಸೇರಿದಂತೆ ಇನ್ನಿತರ ಅಭಿವೃದ್ಧಿ ಕಾಮಗಾರಿಗಳನ್ನು ಅಳವಡಿಸಿ ವಿವರವಾದ ಯೋಜನಾ ವರದಿಯನ್ನು ತಯಾರಿಸಿ ಕೆರೆ ಅಭಿವೃದ್ಧಿ ಕಾಮಗಾರಿಯನ್ನು ಅನುಷ್ಠಾನಗೊಳಿಸಲಾಗುವುದು.

ಸ್ವಚ್ಛ ರಾಜ್ಯ ನಿರ್ಮಾಣ

1064 (1905); ಡಾ॥ ಸುಧಾಕರ್ ಕೆ. (ಚಿಕ್ಕಬಳ್ಳಾಪುರ)

ಅ) ಸ್ವಚ್ಛ ರಾಜ್ಯ ಸಾಧನೆ ಹಂತಹಂತವಾಗಿ; ಮಾಡುವ ನಿರ್ಧಾರ ಕೈಗೊಂಡಿರುವ ಸರ್ಕಾರ ಆ ನಿಟ್ಟಿನಲ್ಲಿ ಹಮ್ಮಿಕೊಂಡಿರುವ ಕಾರ್ಯಕ್ರಮವೇನು;

ಆ) ಈ ನಿಟ್ಟಿನಲ್ಲಿ ಸರ್ಕಾರ ಪರಿಸರ ಇಲಾಖೆಗೆ ನೀಡುವ ಸಲಹೆ ಏನು; ಅದು ಹೇಗೆ ಆಚರಣೆ ಆಗಲಿದೆ (ವಿವರ ನೀಡುವುದು);

ಇ) ಹಂತ ಹಂತವಾಗಿ ಇಡೀ ರಾಜ್ಯವನ್ನು ಸ್ವಚ್ಛ ರಾಜ್ಯವಾಗಿಸುವ ಪರಿಕಲ್ಪನೆ ಸರ್ಕಾರಕ್ಕಿದೆಯೇ; ಇದಕ್ಕೆ ಅಗತ್ಯ ಸಹಕಾರ ಸರ್ಕಾರದಿಂದ ಸಿಗಲಿದೆಯೇ (ವಿವರ ನೀಡುವುದು);

ಈ) ಸಾರ್ವಜನಿಕ ವಲಯದಲ್ಲಿ ಪರಿಸರ ಜಾಗೃತಿಗೆ ಸರ್ಕಾರ ಕೈಗೊಂಡ ಕ್ರಮಗಳೇನು (ವಿವರ ನೀಡುವುದು);

ಉ) ಬೆಂಗಳೂರು ಮಹಾನಗರದಲ್ಲಿ ಪರಿಸರ ನಿಯಂತ್ರಣ ಕಲುಷಿತ ಗೊಳ್ಳುತ್ತಿರುವ ಪರಿಸರ ಶುದ್ಧಿಗೆ ಸರ್ಕಾರ ಕೈಗೊಂಡ ಕ್ರಮಗಳೇನು?

ಶ್ರೀ ಬಿ. ರಮಾನಾಥ ರೈ (ಮಾನ್ಯ ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ ಸಚಿವರು)

ಅ) ಸ್ವಚ್ಛ ರಾಜ್ಯಕ್ಕಾಗಿ ಹಂತ ಹಂತವಾಗಿ ಕೈಗೊಳ್ಳಲು ಪರಿಸರ ಕಾಯ್ದೆ, 1986ರಡಿ ಹೊರಡಿಸಲಾದ ನಿಯಮಗಳನ್ವಯ ಅನುಷ್ಠಾನಗೊಳಿಸಲಾಗುತ್ತಿದೆ. ಅವುಗಳಲ್ಲಿ ಪ್ರಮುಖವಾದವುಗಳನ್ನು ಈ ಕೆಳಕಾಣಿಸಲಾಗಿದೆ.

ಆಸ್ಪತ್ರೆಗಳಲ್ಲಿ ಉತ್ಪಾದನೆಯಾಗುವ ತ್ಯಾಜ್ಯದಿಂದ ಮಾಲಿನ್ಯ ತಡಗಟ್ಟಲು,

ಅ) ಜೀವ ವೈದ್ಯಕೀಯ ತ್ಯಾಜ್ಯ ನಿರ್ವಹಣೆ ನಿಯಮ 1998 ಮತ್ತು 2003ರಲ್ಲಿ ತಿದ್ದುಪಡಿ.

ಖಾಸಗಿ ಮತ್ತು ಸರ್ಕಾರಿ ಆಸ್ಪತ್ರೆಗಳಿಂದ ಚಿಕಿತ್ಸಾಲಯಗಳಿಂದ, ಪಶು ವೈದ್ಯಕೀಯ ಸಂಸ್ಥೆಗಳಿಂದ, ಪ್ರಾಣಿ ಸಂಗ್ರಹಾಲಯಗಳಿಂದ, ರಕ್ತ ಪರೀಕ್ಷಾ ಕೇಂದ್ರಗಳಿಂದ, ರಕ್ತ ನಿಧಿಯಿಂದ ಹೊರಹೊಮ್ಮುವ ಜೀವ ವೈವಿಧ್ಯ ತ್ಯಾಜ್ಯಗಳನ್ನು ಜನರ ಆರೋಗ್ಯ ಮತ್ತು ಪರಿಸರದ ಮೇಲೆ ಹಾನಿಯಾಗದಂತೆ ಕ್ರಮ ಕೈಗೊಳ್ಳುವುದು, ಮೇಲೆ ತಿಳಿಸಲಾದ ಜೀವ ವೈವಿಧ್ಯ ತ್ಯಾಜ್ಯ ಉತ್ಪನ್ನಕಾರಕ ಸಂಸ್ಥೆಗಳ ಮಾಲೀಕರ ಜವಾಬ್ದಾರಿಯಾಗಿರುತ್ತದೆ.

ಈ ನಿಯಮ ಪಾಲಿಸುವುದನ್ನು ಕಡ್ಡಾಯಗೊಳಿಸುವ ಉಸ್ತುವಾರಿಯು ಕರ್ನಾಟಕ ರಾಜ್ಯ ಮಾಲಿನ್ ನಿಯಂತ್ರಣ ಮಂಡಳಿಯದ್ದಾಗಿರುತ್ತದೆ.

ಸಾರ್ವಜನಿಕ ವಲಯದಲ್ಲಿನ ಮತ್ತು ಕೈಗಾರಿಕಾ ವಲಯಗಳಲ್ಲಿನ ಚಟುವಟಿಕೆಗಳಿಂದ ಉತ್ಪನ್ನವಾಗುವ ತ್ಯಾಜ್ಯಗಳಿಂದ ಮಾಲಿನ್ಯ ತಡೆ ಗಟ್ಟಲು

ಆ) ಪ್ಲಾಸ್ಟಿಕ್ ತ್ಯಾಜ್ಯ ನಿರ್ವಹಣೆ, 2011

ಈ ನಿಯಮದಡಿ 40 ಮೈಕ್ರಾನ್‌ಗಿಂತ ಕಡಿಮೆ ದಪ್ಪದ ಪ್ಲಾಸ್ಟಿಕ್ ಕ್ಯಾರಿ ಬ್ಯಾಗ್‌ಗಳನ್ನು ಉತ್ಪಾದಿಸುವಂತಿಲ್ಲ. ಶೇಕರಿಸುವಂತಿಲ್ಲ, ವಿತರಿಸುವಂತಿಲ್ಲ ಅಥವಾ ಮಾರುವಂತಿಲ್ಲ.

ಈ ನಿಯಮಗಳಡಿ ಉತ್ಪಾದನೆ ವಿಚಾರದಲ್ಲಿ ಪಾಲನೆ ಉಸ್ತುವಾರಿಯು ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯದ್ದಾಗಿರುತ್ತದೆ. ಹಾಗೂ ಈ ನಿಯಮದಡಿ ಪ್ಲಾಸ್ಟಿಕ್‌ನ ಬಳಕೆ ಸಂಗ್ರಹಣೆ, ವಿಂಗಡಣೆ, ಸಾಗಾಣಿಕೆ ಮತ್ತು ಪ್ಲಾಸ್ಟಿಕ್ ತ್ಯಾಜ್ಯದ ವಿಲೇವಾರಿಯ ಜವಾಬ್ದಾರಿಯು ನಗರ / ಪುರ ಸಭೆಗಳದ್ದಾಗಿರುತ್ತದೆ.

ಸಾರ್ವಜನಿಕ ವಲಯದಲ್ಲಿನ ಮತ್ತು ಕೈಗಾರಿಕಾ ವಲಯಗಳಲ್ಲಿನ ಚಟುವಟಿಕೆಗಳಿಂದ ಉತ್ಪನ್ನವಾಗುವ ತ್ಯಾಜ್ಯಗಳಿಂದ ಮಾಲಿನ್ಯ ತಡೆ ಗಟ್ಟಲು

ಇ) ಬ್ಯಾಟರೀಸ್ ನಿರ್ವಹಣೆ, 2001

ಈ) ಎಲೆಕ್ಟ್ರಾನಿಕ್ ತ್ಯಾಜ್ಯ ನಿರ್ವಹಣೆ, 2011

ಎಲೆಕ್ಟ್ರೀಕಲ್ ಮತ್ತು ಎಲೆಕ್ಟ್ರಾನಿಕ್ ಉತ್ಪನ್ನಗಳ ಉತ್ಪಾದಕರು, ಸಂಗ್ರಕಾರರು ಮತ್ತು ಮಾರಾಟಗಾರರು ಬ್ಯಾಟರೀಸ್ ತ್ಯಾಜ್ಯ ಮತ್ತು ಎಲೆಕ್ಟ್ರಾನಿಕ್ ಮತ್ತು ಮಾರಾಟಗಾರರು ಬ್ಯಾಟರೀಸ್ ತ್ಯಾಜ್ಯ ಮತ್ತು ಎಲೆಕ್ಟ್ರಾನಿಕ್ ತ್ಯಾಜ್ಯಗಳ ವೈಜ್ಞಾನಿಕ ವಿಲೆವಾರಿಗಾಗಿ ಸಹಕಾರ ನೀಡಲು ಜವಾಬ್ದಾರಿಯನ್ನು ಹೊಂದಿರುತ್ತಾರೆ. ಈ ನಿಯಮಗಳ ಪಾಲನೆ ಉಸ್ತು

ಪಾರಿಯು ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯದ್ದಾಗಿರುತ್ತದೆ.

ಸಾರ್ವಜನಿಕ ಪ್ರದೇಶದಲ್ಲಿ ಉತ್ಪನ್ನವಾಗುವ ಘನ ತ್ಯಾಜ್ಯಗಳಿಂದ ಮಾಲಿನ್ಯ ತಡೆಗಟ್ಟಲು

ಊ) ಘನ ತ್ಯಾಜ್ಯ ನಿರ್ವಹಣೆ 2000

ಈ ನಿಯಮದಡಿ ತ್ಯಾಜ್ಯದ ವಿಲೇವಾರಿಯ ಜವಾಬ್ದಾರಿಯು ನಗರ / ಪುರಸಭೆಗಳದ್ದಾಗಿರುತ್ತದೆ. ಈ ನಿಯಮ ಪಾಲನೆ ಆಯಾಯ ನಗರಾಭಿವೃದ್ಧಿ ಇಲಾಖೆಯಡಿ ಬರುವ ಸಂಬಂಧಪಟ್ಟ ಪ್ರಾಧಿಕಾರದ್ದಾಗಿರುತ್ತದೆ. ಹಾಗೂ ತ್ಯಾಜ್ಯ ನಿರ್ವಹಣಾ ಘಟಕಗಳಲ್ಲಿ ವೈಜ್ಞಾನಿಕ ವಿಲೇವಾರಿ ಕುರಿತು ಆಯಾಯ ವಾರಿಯು ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯದ್ದಾಗಿರುತ್ತದೆ.

ಸಾರ್ವಜನಿಕ ಪ್ರದೇಶದಲ್ಲಿ ಮತ್ತು ವಾಹನಗಳಿಂದ ಆಗುವ ಶಬ್ದ ಮಾಲಿನ್ಯದಿಂದ ಹಾಗೂ ಕೈಗಾರಿಕಾ ಪ್ರದೇಶದಲ್ಲಿನ ಶಬ್ದ ಮಾಲಿನ್ಯ ತಡೆಗಟ್ಟಲು

ಊ) ಶಬ್ದ ಮಾಲಿನ್ಯ ನಿರ್ವಹಣೆ 2000 ಹಾಗೂ 2002 ಮತ್ತು 2006 ರಲ್ಲಿ ತಿದ್ದುಪಡಿ.

ಸಾರ್ವಜನಿಕ ವಲಯದಲ್ಲಿ ಮತ್ತು ವಾಹನಗಳಿಂದ ಆಗುವ ಶಬ್ದ ಮಾಲಿನ್ಯವನ್ನು ತಡೆಗಟ್ಟುವ ಜವಾಬ್ದಾರಿಯು ಪೊಲೀಸ್ ಇಲಾಖೆಯದ್ದಾಗಿರುತ್ತದೆ. ಕೈಗಾರಿಕಾ ವಲಯದಿಂದಾಗುವ ಶಬ್ದ ಮಾಲಿನ್ಯ ತಡೆಗಟ್ಟುವ ಜವಾಬ್ದಾರಿಯು ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯದ್ದಾಗಿರುತ್ತದೆ.

ಈ ನಿಯಮಗಳನ್ನೊಳಗೊಂಡು ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯು ಜಲ ಕಾಯ್ದೆ, 1974 ಮತ್ತು ವಾಯು

ಕಾಯ್ದೆ, 1981ರ ವಾಯು ಮಾಲಿನ್ಯ ಮತ್ತು ಜಲ ಮಾಲಿನ್ಯ ತಡೆಗಟ್ಟುವ ಅಧಿಕಾರವನ್ನು ಹೊಂದಿರುತ್ತದೆ.

ಈ ಮೂಲಕ ವಾಯು ಮಾಲಿನ್ಯ ಜಲ ಮಾಲಿನ್ಯ, ಶಬ್ದ ಮಾಲಿನ್ಯ ಗಳನ್ನು ನಿಯಂತ್ರಿಸಲು ಸಹಕಾರವಾಗಿರುತ್ತದೆ.

ಪರಿಸರ ಜಾಗೃತಿ ಕಾರ್ಯಕ್ರಮದ ಮೂಲಕ ಪರಿಸರ ಮಾಲಿನ್ಯ ತಡೆ ಗಟ್ಟಲು ಜನರಲ್ಲಿ ಅರಿವನ್ನು ಮೂಡಿಸಲಾಗುತ್ತಿದೆ. ಹಾಗೂ ಈ ನಿಟ್ಟಿನಲ್ಲಿ ಪರಿಸರ ಮಾಲಿನ್ಯವನ್ನು ತಡೆಗಟ್ಟುವಲ್ಲಿ ನಿರತರಾದ ವ್ಯಕ್ತಿಗಳಿಗೆ ಹಾಗೂ ಸಂಸ್ಥೆಗಳಿಗೆ ಪರಿಸರ ಪ್ರಶಸ್ತಿಯನ್ನು ಸಹ ಪ್ರತಿ ವರ್ಷ ನೀಡಲಾಗುತ್ತಿದೆ.

(ಆ) ಪರಿಸರ ಕಾಯ್ದೆ, 1986ರಡಿ ಹೊರಡಿಸಲಾದ ನಿಯಮಗಳನ್ನು ಅನುಷ್ಠಾನಗೊಳಿಸಲು ಪರಿಸರ ಇಲಾಖೆಗೆ ಸೂಚನೆಗಳನ್ನು ನೀಡ ಲಾಗಿರುತ್ತದೆ. ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯು ಜಲ ಕಾಯ್ದೆ, 1974, ವಾಯು ಕಾಯ್ದೆ, 1981 ಮತ್ತು ಪರಿಸರ ಕಾಯ್ದೆ, 1986 ರಡಿ ಹಲವು ನಿಯಮಗಳನ್ನು ಅನುಷ್ಠಾನಗೊಳಿಸುವ ಜವಾಬ್ದಾರಿ ಹೊಂದಿದ್ದು, ಅವುಗಳನ್ನು ಕಟ್ಟುನಿಟ್ಟಿನಂತೆ ಪಾಲಿಸಲು ಸಂಬಂಧಪಟ್ಟ ಪ್ರಾಧಿಕಾರಗಳಿಗೆ ಸೂಚಿಸಲಾಗಿದೆ.

(ಇ) ಇದೆ. ಪರಿಸರ ಕಾಯ್ದೆ, 1986ರಡಿ ಹೊರಡಿಸಲಾದ ನಿಯಮ ಗಳನ್ನು ಅನುಷ್ಠಾನಗೊಳಿಸಲು ಅಗತ್ಯ ಸಹಕಾರ ನೀಡಲಾಗುತ್ತಿದೆ. ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯು ಜಲ ಕಾಯ್ದೆ, 1974, ವಾಯು ಕಾಯ್ದೆ, 1981 ಮತ್ತು ಪರಿಸರ ಕಾಯ್ದೆ, 1986 ರಡಿ ಹಲವು ನಿಯಮಗಳನ್ನು ಅನುಷ್ಠಾನಗೊಳಿಸುವ ಜವಾಬ್ದಾರಿ ಹೊಂದಿದ್ದು, ಅವುಗಳನ್ನು ಕಟ್ಟುನಿಟ್ಟಿನಂತೆ ಪಾಲಿಸಲು ಸೂಚನೆ ನೀಡಲಾಗಿರುತ್ತದೆ ಮತ್ತು ಅದರ ಪಾಲನೆಗೆ ಅಗತ್ಯ ಸಹಕಾರವನ್ನು ನೀಡಲಾಗುತ್ತಿದೆ.

(ಈ) ಸಾರ್ವಜನಿಕ ವಲಯದಲ್ಲಿ ಪರಿಸರ ಜಾಗೃತಿಗೆ ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯು ಹಮ್ಮಿಕೊಳ್ಳಲಾಗಿರುವ ಕೆಳಕಂಡ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿರುತ್ತದೆ:

1) ಪರಿಸರ ಜಾಗೃತಿಗೆ ಪ್ರತಿ ವಾಲಿನಲ್ಲೂ ಮಂಡಳಿಯು ಕ್ರಿಯಾ ಯೋಜನೆಯನ್ನು ಹಮ್ಮಿಕೊಂಡು ರಾಜ್ಯಾದ್ಯಂತ ಕೆಳಕಂಡ ಕಾರ್ಯ ಕ್ರಮಗಳನ್ನು ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯ ಮೂಲಕ ನಡೆಸುತ್ತಿದೆ:

- ಘನ ತ್ಯಾಜ್ಯ ನಿರ್ವಹಣೆ ಬಗ್ಗೆ.
- ಜೀವ ವೈದ್ಯಕೀಯ ತ್ಯಾಜ್ಯ ನಿರ್ವಹಣೆ ಬಗ್ಗೆ.
- ವಾಯು ಮಾಲಿನ್ಯ ಹಾಗೂ ಜಲ ಮಾಲಿನ್ಯದ ಬಗ್ಗೆ.
- ಸ್ಲೊಗ್ ಸ್ಯಾಂಡ್ ಉಪಯೋಗಿಸುವ ಬಗ್ಗೆ
- ರಾಸಾಯನಿಕ ದುರಂತ ನಿಯಂತ್ರಣ ಬಗ್ಗೆ.
- ವಾಹನಗಳ ಹೊಗೆಯಿಂದ ಶಬ್ದ ತಡೆಯಲು ನೋ ಹಾರ್ನ್‌ಕಿಂಗ್ ಬಗ್ಗೆ ಜಾಗೃತಿ.
- ಇ-ತ್ಯಾಜ್ಯ ಮಾಲಿನ್ಯದ ಬಗ್ಗೆ
- ಓಜೋನ್ ಮತ್ತು ಅದರ ಪರಿಣಾಮಗಳ ಬಗ್ಗೆ.

2) ಶಾಲಾ ಮಕ್ಕಳಿಗೆ ಜಾಗೃತಿ ಮೂಡಿಸಲು ಕೆಳಕಂಡ ಕಾರ್ಯಕ್ರಮ ಗಳನ್ನು:

ಅ) **ಪರಿಸರ ಮಿತ್ರ ಶಾಲಾ ಕಾರ್ಯಕ್ರಮ:** ಶಾಲಾ ಮಕ್ಕಳಲ್ಲಿ 6 ವಿಷಯ ಗಳಾದ ಜಲ, ವಾಯು, ಶಕ್ತಿ ಮಣ್ಣು, ಆರೋಗ್ಯ ಮತ್ತು ನೈರ್ಮಲ್ಯ (ಸ್ವಚ್ಛತೆ) ಮತ್ತು ಶಾಲೆಯ ಸುತ್ತ ಮುತ್ತಲಿನ ಪರಿಸರ ಪರಿಚರಯದ ಬಗ್ಗೆ ಅರಿವು ಮೂಡಿಸುವುದು.

ಆ) **ವಿಶ್ವ ಪರಿಸರ ದಿನಾಚರಣೆ:** ಮಂಡಳಿಯು ವಿಶ್ವ ಪರಿಸರ ದಿನದ ಘೋಷಣೆಯ ಬಗ್ಗೆ ಚಿತ್ರಕಲಾ ಸ್ಪರ್ದೆಗಳನ್ನು ಎಲ್ಲಾ ಜಿಲ್ಲೆಗಳಲ್ಲಿ ನಡೆಸು ತ್ತಿದೆ. ಬಹುಮಾನಗಳನ್ನು ನೀಡಿ ಪ್ರೋತ್ಸಾಹಿಸುವುದು. ಟಿ. ವಿ. ಮತ್ತು ರೇಡಿಯೋ ಮಾಧ್ಯಮಗಳಲ್ಲಿ ಸಂದರ್ಶನ, ಕಿರುಚಿತ್ರ ಪ್ರದರ್ಶನ, ಭಿತ್ತಿಪತ್ರಗಳ, ಪತ್ರಿಕಾ ಪ್ರಕಟಣೆಗಳ ಮೂಲಕ ಜಾಗೃತಿ ಮೂಡಿಸಲಾ ಗುತ್ತಿದೆ.

ಇ) **ಹಸಿರು ಪೌಷ್ಟಿಕತೆ ಕಾರ್ಯಕ್ರಮ:** ಕೈಗಾರಿಕೆಗಳು ಶಾಲೆಗಳನ್ನು ದತ್ತು ತೆಗೆದುಕೊಂಡು, ಹಸಿರು ಜೀವನ ಶೈಲಿಯ ಸೌಲಭ್ಯಗಳನ್ನು ತಮ್ಮ ಸ್ವಂತ ಖರ್ಚಿನಲ್ಲಿ ಶಾಲೆಗೆ ನೀಡಲು ಕೈಜೋಡಿಸುವುದು.

ಈ) **ಹಸಿರು ವಿಕೆಟ್ ಅಭಿಯಾನ:** ಜರ್ಮನ್ ಸಂಸ್ಥೆಯಾದ ಜಿಐಜೆಡ್‌ರವ ರೊಂದಿಗೆ ಶಾಲಾ ಮಕ್ಕಳಲ್ಲಿ ನೀರು, ತ್ಯಾಜ್ಯ, ಶಕ್ತಿ ಮತ್ತು ನೈರ್ಮಲ್ಯದ ಬಗ್ಗೆ ಅರಿವು ಮೂಡಿಸುವುದು.

ಉ) "ಮರಿದುಂಬಿ" ಎಂಬ ಪುಸ್ತಕವನ್ನು ಕನ್ನಡ ಮತ್ತು ಆಂಗ್ಲ ಭಾಷೆಯಲ್ಲಿ ಪರಿಸರ ಕುರಿತಾದ ವಿಷಯಗಳ ಬಗ್ಗೆ ಶಾಲಾ ಮಕ್ಕಳಿಗಾಗಿ ಪ್ರಕಟಿಸುತ್ತಿದೆ.

ಊ) "ಪರಿಸರ ವಾಹಿನಿ" ಎಂಬ ಮಾಸ ಪತ್ರಿಕೆಯನ್ನೂ ಮಂಡಳಿಯು ಪ್ರಕಟಿಸುತ್ತಿದ್ದು, ಇದರಲ್ಲಿ ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯಿಂದ ಹಮ್ಮಿಕೊಳ್ಳುವ ಜಾಗೃತಿ ಕಾರ್ಯಕ್ರಮಗಳು ಹಾಗೂ ಪರಿಸರಕ್ಕೆ ಸಂಬಂಧಿಸಿದ ವಿಷಯಗಳ ಬಗ್ಗೆ ಮಾಹಿತಿ ನೀಡುವುದು.

3) ಗಣೇಶ ಮತ್ತು ದೀಪಾವಳಿ ಹಬ್ಬಗಳ ದಿನಗಳನ್ನು ಪರಿಸರ ಸ್ನೇಹಿ ರೀತಿಯಲ್ಲಿ ಆಚರಿಸುವ ಸಲುವಾಗಿ ಟಿ. ವಿ. ಮತ್ತು ರೇಡಿಯೋ ಮಾದ್ಯಮಗಳಲ್ಲಿ ಸಂದರ್ಶನ, ಕಿರುಚಿತ್ರ ಪ್ರದರ್ಶನ, ಬ್ಯಾನರ್–ಪೋಸ್ಟರ್ ಹಾಗೂ ಭಿತ್ತಿಚಿತ್ರಗಳ ಮತ್ತು ಪತ್ರಿಕಾ ಪ್ರಕಟಣೆಗಳನ್ನು ಹೊರಡಿಸುವುದು.

ಸ್ವಯಂ ಸೇವಾ ಸಂಸ್ಥೆಗಳು ಜಾಗೃತಿ ಕಾರ್ಯಕ್ರಮಗಳನ್ನು ನಡೆಸಲು ಸಹಕರಿಸುತ್ತಿವೆ ಹಾಗೂ ಅವರು ಹೊರ ತರುವ ಪತ್ರಿಕೆಗಳಲ್ಲಿ ಮತ್ತು ಇತರೆ ಮಾಧ್ಯಮಗಳಲ್ಲಿ ಪರಿಸರಕ್ಕೆ ಸಂಬಂಧಿಸಿದ ಮುಖ್ಯ ವಿಷಯಗಳ ಬಗ್ಗೆ ಪ್ರಕಟಣೆಗಳನ್ನು ನೀಡುತ್ತಿವೆ.

(ಊ) ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯು ಜಲ ಕಾಯ್ದೆ 1974, ವಾಯು ಕಾಯ್ದೆ 1981 ಮತ್ತು ಪರಿಸರ ಕಾಯ್ದೆ 1986 ರಡಿ ಹಲವು ನಿಯಮಗಳನ್ನು ಅನುಷ್ಠಾನಗೊಳಿಸುವ ಜವಾಬ್ದಾರಿ ಹೊಂದಿದೆ. ಈ ಕಾಯ್ದೆಗಳ ಅಡಿಯಲ್ಲಿ ಮಂಡಳಿಯು ಬೆಂಗಳೂರು ನಗರದ ಮಾಲಿನ್ಯವನ್ನು ನಿಯಂತ್ರಿಸುವ ನಿಟ್ಟಿನಲ್ಲಿ ಕಾರ್ಯಕ್ರಮಗಳನ್ನು ರೂಪಿಸಿ ಅನುಷ್ಠಾನಗೊಳಿಸುತ್ತಿದೆ.

ವಾಯು ಮಾಲಿನ್ಯ:

- ಬೆಂಗಳೂರು ನಗರದಲ್ಲಿ ಹೆಚ್ಚುತ್ತಿರುವ ವಾಯು ಮಾಲಿನ್ಯವನ್ನು ತಡೆಟ್ಟುವ ನಿಟ್ಟನಲ್ಲಿ ಮಾನ್ಯ ಸರ್ವೋಚ್ಚ ನ್ಯಾಯಾಲಯದ ಡಬ್ಲ್ಯೂಪಿ ನಂ: 10329/985 (ಸಿವಿಲ್ ಪಿಐಎಲ್) ನಿರ್ದೇಶನದಂತೆ 14 ಅಂಶಗಳ ಕಾರ್ಯಕ್ರಮಗಳನ್ನು ಜಾರಿಗೊಳಿಸಲಾಗುತ್ತಿದೆ. ಸದರಿ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸಲು ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಯವರ ಅಧ್ಯಕ್ಷತೆಯಲ್ಲಿ 2003ರಲ್ಲಿ ಟಾಸ್ಕ್‌ಫೋರ್ಸನ್ನು ರಚಿಸಿ ಮೇಲ್ವಿಚಾರಣೆ ನಡೆಸಲಾಗುತ್ತಿದೆ.

- ಬೆಂಗಳೂರು ನಗರದಲ್ಲಿ ವಾಯು ಮಾಲಿನ್ಯವನ್ನು ತಡೆಗಟ್ಟಲು ಭಾರತ ಸರ್ಕಾರವು 1997ರಲ್ಲಿ ಪ್ರಸಿರು ಇಂಧನ ನೀತಿ ಜಾರಿ ಗೊಳಿಸಿತು. ಇದರಿಂದ ಇಂಧನದಲ್ಲಿ ಸೀಸ ಮುಕ್ತಗೊಳಿಸಿ 0.25%ರಷ್ಟಿದ್ದ ಗಂಧಕದ ಪ್ರಮಾಣವನ್ನು ಹಂತಹಂತವಾಗಿ ಕಡಿಮೆಗೊಳಿಸಿ 2010 ರಿಂದ 0.005% ಗೆ ಇಳಿಸಲಾಗಿದೆ.

- ಕಾರ್ಖಾನೆಗಳಿಂದ ಉಂಟಾಗುವ ವಾಯು ಮಾಲಿನ್ಯವನ್ನು ನಿಯಂತ್ರಿಸಲು ಸೂಕ್ತ ವಾಯು ನಿಯಂತ್ರಣ ಘಟಕಗಳನ್ನು ಅಳವಡಿಕೆ ಜೊತೆಗೆ ಹಸಿರು ಪಟ್ಟಿ ಬೆಳೆಸಲು ಉದ್ದಿಮೆಗಳಿಗೆ ನಿರ್ದೇಶನ ನೀಡಲಾಗಿದೆ.

- ಸಮೂಹ ಸಾರಿಗೆ ಉತ್ತೇಜಿಸಿ ವಾಯು ಮಾಲಿನ್ಯ ನಿಯಂತ್ರಿಸುವ ನಿಟ್ಟಿನಲ್ಲಿ ಬೆಂಗಳೂರು ಮಹಾನಗರ ಸಾರಿಗೆ ಸಂಸ್ಥೆಯು ಮಂಡಳಿಯ ಸಹಯೋಗದೊಂದಿಗೆ "ಬಸ್ ದಿನ್" ಎಂಬ ಕಾರ್ಯಕ್ರಮವನ್ನು ದಿನಾಂಕ 04.11.2010 ರಿಂದ ಪ್ರಾರಂಭಿಸಿ, ಪ್ರತೀ ತಿಂಗಳ 4ನೇ ತಾರೀಖಿನಂದು ಆಯ್ದ ರಸ್ತೆಗಳಲ್ಲಿ ಸಮೂಹ ಸಾರಿಗೆ ವ್ಯವಸ್ಥೆ ಅಳವಡಿಸಿ ಅನುಷ್ಠಾನಗೊಳಿಸಲಾಗುತ್ತಿದೆ.

ಶಬ್ದ ಮಾಲಿನ್ಯ:

- ಕೇಂದ್ರ ಅರಣ್ಯ ಮತ್ತು ಪರಿಸರ ಮಂತ್ರಾಲಯ ಮಹಾನಗರಗಳಲ್ಲಿ ಹೆಚ್ಚುತ್ತಿರುವ ಶಬ್ದ ಮಾಲಿನ್ಯ ನಿಯಂತ್ರಿಸುವ ನಿಟ್ಟಿನಲ್ಲಿ ವೈಜ್ಞಾನಿಕವಾಗಿ ಶಬ್ದ ಮಾಪನ ಮಾಡುವ ಕಾರ್ಯಕ್ರಮವನ್ನು ರಾಷ್ಟ್ರೀಯ ಯೋಜನೆಯನ್ನಾಗಿ 2010ರಲ್ಲಿ ಘೋಷಿಸಿದೆ. ಈ ಯೋಜನೆಯಡಿ ಮಂಡಳಿಯು ಬೆಂಗಳೂರು ನಗರದಲ್ಲಿ ಐದು ನಿರಂತರ ಶಬ್ದ ಮಾಪನ ಕೇಂದ್ರಗಳನ್ನು 2011ರಲ್ಲಿ ಸ್ಥಾಪಿಸಿದೆ. ಈ ಕೇಂದ್ರಗಳು ನಿರಂತರವಾಗಿ ಶಬ್ದ ಮಾಪನ ಕಾರ್ಯ ನಿರ್ವಹಿಸುತ್ತಿವೆ. ಈ ಸಾಲಿನಲ್ಲಿ ಇನ್ನು ಐದು ನಿರಂತರ ಶಬ್ದ ಮಾಲಿನ್ಯ ಮಾಪನ ಕೇಂದ್ರಗಳನ್ನು ಸ್ಥಾಪಿಸಲು ಕ್ರಮ ಕೈಗೊಂಡಿದೆ.

- ಬೆಂಗಳೂರು ನಗರದಲ್ಲಿ ಹೆಚ್ಚುತ್ತಿರುವ ಶಬ್ದ ಮಾಲಿನ್ಯವನ್ನು ತಡೆಗಟ್ಟುವ ನಿಟ್ಟಿನಲ್ಲಿ ಮಾನ್ಯ ಉಚ್ಚ ನ್ಯಾಯಾಲಯದ ಡಬ್ಲ್ಯೂಪಿ ನಂ. 45881/2012 ಮತ್ತು ಡಬ್ಲ್ಯೂಪಿ ನಂ. 39432/2013ರ ನಿರ್ದೇಶನದಂತೆ ಮಂಡಳಿಯು ಸೆಕ್ಷನ್ 31 (ಎ) ರ ವಾಯು ಕಾಯ್ದೆಯ ಅನ್ವಯ ಶಬ್ದ ಮಾಲಿನ್ಯ ತಡೆಗಟ್ಟಲು ತೆಗೆದುಕೊಳ್ಳಬೇಕಾದ ಕ್ರಮಗಳ ಬಗ್ಗೆ ನಗರ ಪೋಲೀಸ್ ಇಲಾಖೆ, ಬೆಂಗಳೂರು ಮಹಾನಗರ ಪಾಲಕೆ ಮತ್ತು ಸಾರಿಗೆ ಇಲಾಖೆಗಳಿಗೆ ನಿರ್ದೇಶನಗಳನ್ನು ನೀಡಿದೆ.

• ಮಾನ್ಯ ಉಚ್ಚ ನ್ಯಾಯಾಲಯದ ನಿರ್ದೇಶನದಂತೆ ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯ ಸದಸ್ಯ ಕಾರ್ಯದರ್ಶಿಗಳವರ ಅಧ್ಯಕ್ಷತೆಯಲ್ಲಿ, ಮಹಾನಗರ ಪಾಲಿಕೆ, ಪೊಲೀಸ್ ಇಲಾಖೆ, ಬೆಂಗಳೂರು ನಗರಾಭಿವೃದ್ಧಿ ಪ್ರಾಧಿಕಾರ, ಸಾರಿಗೆ ಇಲಾಖೆ, ಬೆಂಗಳೂರು ಮಹಾನಗರ ಸಾರಿಗೆ ಸಂಸ್ಥೆ ಮತ್ತು ಅಮಿಕಸ್ ಕ್ಯೂರಿ ಇವರನ್ನೊಳಗೊಂಡ ಸಮನ್ವಯ ಸಮಿತಿಯನ್ನು ರಚಿಸಿದೆ. ಈ ಸಮನ್ವಯ ಸಮಿತಿಯು ಶಬ್ದ ಮಾಲಿನ್ಯ ನಿಯಂತ್ರಿಸಲು ರೂಪಿಸಿದೆ ಕಾರ್ಯಕ್ರಮಗಳನ್ನು ಸಂಬಂಧಿಸಿದ ಇಲಾಖೆಗಳು ಅನುಷ್ಠಾನಗೊಳಿಸುವ ಬಗ್ಗೆ ಕ್ರಮ ಕೈಗೊಳ್ಳುತ್ತಿವೆ.

ಜಲಮಾಲಿನ್ಯ:

• ಜಲಮಾಲಿನ್ಯದ ಮಟ್ಟವನ್ನು ತಿಳಿಯಲು ಮಂಡಳಿಯು ನಗರ ವ್ಯಾಪ್ತಿಯಲ್ಲಿ 50 ಕೆರೆಗಳನ್ನು ಗುರುತಿಸಿ ಪ್ರತೀ ತಿಂಗಳು ಮಾದರಿಗಳನ್ನು ಸಂಗ್ರಹಿಸಿ ವಿಶ್ಲೇಷಣೆ ಮಾಡಿ ವರದಿಯನ್ನು ತಯ್ಯಾರಿಸುತ್ತಿದೆ. ನೀರಿನ ವಿಶ್ಲೇಷಣೆ ವರದಿಯ ಪ್ರಕಾರ ಶೇಕಡ 92 ರಷ್ಟು ಕೆರೆಗಳು ಮಲೀನ ಗೊಂಡಿವೆ (ವರ್ಗ – ಇ) ಉಳಿದ ಶೇಕಡ 8 ರಷ್ಟು ಕೆರೆಗಳು (ವರ್ಗ–ಡಿ) ಶುದ್ಧಾರ್ಹಾ ಮಲಿನಗೊಂಡಿವೆ. ವಿಶ್ಲೇಷಣಾ ವರದಿಯನ್ನು ಸಂಬ್ಧಂಧಪಟ್ಟ ಇಲ್ರಾಖೆಗಳಿಗೆ / ಬಿಬಿಎಂಪಿ/ಬಿಡಿಎಗೆ ಕಳುಹಿಸಿ ಕ್ರಮಕೈಗೊಳ್ಳಲು ತಿಳಿಸಲಾಗಿದೆ.

• ಒಳಚರಂಡಿ ವ್ಯವಸ್ಥೆ ಇಲ್ಲದ ಪ್ರದೇಶದಲ್ಲಿ ಸ್ಥಾಪಿಸಲ್ಪಟ್ಟಿರುವ ಅಪಾರ್ಟ್‌ಮೆಂಟ್‌ಗಳಲ್ಲಿ ಉತ್ಪಾದನೆಯಾಗುವ ನೀರನ್ನು ಸಂಸ್ಕರಿಸಿಲು ಹೊಚ್ಚಿಸಿ ನೀರು ಸಂಸ್ಕರಣಾ ಘಟಕಗಳನ್ನು ಸ್ಥಾಪಿಸುವುದನ್ನು ಕಡ್ಡಾಯಗೊಳಿಸಲಾಗಿದೆ. ಈ ಸಂಸ್ಕರಣಾ ಘಟಕಗಳಲ್ಲಿ ಸಂಸ್ಕರಿಸಿದ ನೀರನ್ನು ಆವರಣದೊಳಗೆ ಗಿಡಮರಗಳನ್ನು ಬೆಳೆಸಲು, ನೆಲ, ವಾಹನಗಳನ್ನು ತೊಳೆಯಲು, ಹಾಗೂ ಶೌಚಾಲಯಕ್ಕೆ ಶುಚಿಗೊಳಿಸಲು ಬಳಸುವಂತೆ ಪ್ರೇರೇಪಿಸಲಾಗುತ್ತಿದೆ.

• ಬೆಂಗಳುರು ನಗರದ ಮಧ್ಯಮ ಮತ್ತು ಸಣ್ಣ ಕೈಗಾರಿಕೆಗಳಿಂದ ಉತ್ಪತ್ತಿಯಾಗುವ ಕಲುಷಿತ ನೀರು ಶುದ್ಧೀಕರಿಸಲು ಮಂಡಳಿಯು ಎಂಟು ಸಾಮೂಹಿಕ ಸಂಸ್ಕರಣಾ ಘಟಕಗಳಿಗೆ ಅನುಮತಿ ನೀಡಿದ್ದು, ಇವುಗಳು ಕಾರ್ಯಾಚರಣೆಯಲ್ಲಿವೆ. ಬೃಹತ್ ಕೈಗಾರಿಕೆಗಳು ಕಲುಷಿತ ನೀರನ್ನು ಶುದ್ಧಿಕರಿಸಲು ತಮ್ಮದೇ ಆದ ಶುದ್ಧಿಕರಣ ಘಟಕಗಳನ್ನು ಸ್ಥಾಪಿಸುವುದನ್ನು ಕಡ್ಡಾಯಗೊಳಿಸಲಾಗಿದೆ.

ಹೋಬಳಿ ಮಟ್ಟದಲ್ಲಿ ಪಿಂಚಣಿ ಅದಾಲತ್

1065 (1906); ಡಾ॥ ಸುಧಾಕರ್ ಕೆ. (ಚಿಕ್ಕಬಳ್ಳಾಪುರ)

ಅ) ಹೋಬಳಿ ಮಟ್ಟದಲ್ಲಿ ಪಿಂಚಣಿ ಅದಾಲತ್ ನಡೆಸುವ ಕಾರ್ಯ ಆರಂಭವಾಗಿದೆಯೇ;

ಆ) ಈ ಪಿಂಚಣಿ ಅದಾಲತ್ ನಲ್ಲಿ ಯಾವ ಯಾವ ಸಮಸ್ಯೆಗೆ ಪರಿಹಾರ ನೀಡಲು ಸರ್ಕಾರ ನಿರ್ಧರಿಸಿದೆ (ವಿವರ ನೀಡುವುದು) ;

ಇ) ಅದಾಲತ್ ಮೂಲಕ ಸಾರ್ವಜನಿಕರನ್ನು ತಲುಪುವ ಕಾರ್ಯಕ್ಕೆ ಯಾವ ರೀತಿ ರೂಪುರೇಷೆ ರೂಪಿಸಲಾಗಿದೆ; ಇಲ್ಲಿ ಬರುವ ದೂರುಗಳನ್ನು ಹೇಗೆ ನಿರ್ವಹಿಸಲಾಗುತ್ತಿದೆ (ವಿವರ ನೀಡುವುದು) ;

ಈ) ಜನಶ್ರೀ ಭೀಮಾ ಯೋಜನೆಯನ್ನು ಆಮ್ ಆದ್ಮಿ ಭೀಮಾ ಯೋಜನೆ ಅಡಿ ವಿಲೀನಗೊಳಿಸಲು ಸರ್ಕಾರ ತೀರ್ಮಾನಿಸಲಾಗಿದೆಯೇ; ಇದರಿಂದ ಆಗುವ ಅನುಕೂಲವೇನು (ವಿವರ ನೀಡುವುದು)`;

ಉ) ಇದಕ್ಕಾಗಿ ಎಷ್ಟು ಅನುದಾನ ಮೀಸಲಿಡಲಾಗಿದೆ; ಹೆಚ್ಚು ಜನರನ್ನು ಈ ಯೋಜನೆ ತಲುಪಲು ಹಮ್ಮಿಕೊಂಡಿರುವ ಕಾರ್ಯಕ್ರಮಗಳೇನು;

ಊ) ಮಾಜೀ ಪಟೇಲರುಗಳಿಗೆ ಹಾಲೀ ನೀಡುತ್ತಿರುವ ಪಿಂಚಣಿ ಮೊತ್ತವೆಷ್ಟು? ಈಗ ಇದನ್ನು ಹೆಚ್ಚಿಸಲಾಗಿದೆಯೇ ಎಷ್ಟು ಮೊತ್ತವನ್ನು ಏರಿಸಲಾಗಿದೆ (ವಿವರ ನೀಡುವುದು) ;